ಮಾತು-ಕತೆ

# ಪ್ರೇಕ್ಷಕರ ಅಭಿರುಚಿ ಪ್ರಶ್ನಿಸುವ ಸವಾಲಿನ ಮಾದರಿಯ ದಾರಿ

**ವಿಶಾಖ ಎನ್.**

‘ಅಫೇರ್ಸ್ ಆಫ್ ಕಾಸ್ಟ್ – ಎ ಯಂಗ್ ಡೈರಿ’ ಎಂಬ ಕೃತಿಯ ಮೂಲಕ ದಲಿತ ಸಂಕಟಗಳನ್ನು ಅನುಭವಗಳ ಆಧಾರದ ಮೇಲೆ ದಾಖಲಿಸಿರುವವರು ಸುಮಿತ್ ಸಾಮೋಸ್. ಅವರು ‘ದಲಿತ್ ರ್‍ಯಾಪರ್’ ಎಂದೂ ಪರಿಚಿತರು. ದಕ್ಷಿಣ ಒಡಿಶಾದ ತೆಂತುಲಿಪದಾರ್ ಎಂಬ ಹಳ್ಳಿಯವರು ಸುಮಿತ್. ಜವಾಹರಲಾಲ್ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಲ್ಯಾಟಿನ್ ಅಮೆರಿಕನ್ ಇಂಗ್ಲಿಷ್‌ನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದವರು. ಕ್ರೌಡ್ ಫಂಡಿಂಗ್ ಮೂಲಕ ಶುಲ್ಕ ಸಂಗ್ರಹಿಸಿಕೊಂಡು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ‘ಸೌತ್ ಏಷ್ಯನ್ ಸ್ಟಡೀಸ್’ ವಿಷಯದಲ್ಲಿ ಎಂ.ಎಸ್‌ಸಿ ಮಾಡಿ ಬಂದಿರುವ ಅವರು 2023ರ ಜೈಪುರ ಸಾಹಿತ್ಯೋತ್ಸವದ ಗೋಷ್ಠಿಗಳಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಆಗ ‘ಮಯೂರ’ ಪತ್ರಿಕೆಯೊಂದಿಗೆ ಮಾತಿಗೆ ತೆರೆದುಕೊಂಡರು.

◆ **ಹೊಸ ತಲೆಮಾರಿನ ದಲಿತರು ರ್‍ಯಾಪ್ ಮೊರೆಹೋಗಲು ಕಾರಣವೇನು?**

ನಾನು ಜೆಎನ್‌ಯುನಲ್ಲಿ ಕಲಿಯುವಾಗಲೇ ಚಳವಳಿಕಾರನೂ ಆಗಿದ್ದೆ. ಬಿರ್ಸಾ ಅಂಬೇಡ್ಕರ್ ಫುಲೆ ಸ್ಟೂಡೆಂಟ್ಸ್ ಅಸೋಸಿಯೇಷನ್‌ನ ಭಾಗವಾಗಿದ್ದೆ. ಕಾವ್ಯದ ಮೂಲಕ ದಲಿತ ಸಂವೇದನೆ ಪ್ರಕಟಪಡಿಸುವುದು ಸಾಮಾನ್ಯ. ರೋಹಿತ್ ವೇಮುಲ ಇಲ್ಲವಾದ ಸಂದರ್ಭ ನನ್ನನ್ನು ಗಾಸಿಗೊಳಿಸಿತು. ನಾವು ಯಾವ ಸಮಾಜದಲ್ಲಿ ಇದ್ದೇವೆ ಎಂದು ಕಾಡತೊಡಗಿತು. ಆಗ ನನ್ನಲ್ಲೂ ಕೆಲವು ಸಾಲುಗಳು ಮೂಡಿದವು. ರ್‍ಯಾಪ್ ಮಾಡಿದರೆ ಹೆಚ್ಚು ಜನರನ್ನು ತಲುಪುತ್ತದೆ. ಹೀಗಾಗಿ, 2018ರಲ್ಲಿ ನಾನು ಮೊದಲ ರ್‍ಯಾಪ್ ಅನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಿದೆ. ಡಿವೈನ್ ತರಹದ ರ್‍ಯಾಪರ್ ಯಶಸ್ವಿಯಾದದ್ದೇ ರ್‍ಯಾಪ್ ಮೂಲಕ. ಅಂತಹವರು ನನ್ನಂಥವರಿಗೂ ಈ ವಿಷಯದಲ್ಲಿ ಪ್ರೇರಕ.

◆ **ತಮಿಳುನಾಡಿನಲ್ಲಿ ಸಿನಿಮಾದಲ್ಲಿಯೂ ರ್‍ಯಾಪ್ ಮೂಲಕ ದಲಿತರ ದನಿ ಅನಾವರಣಗೊಳ್ಳುತ್ತಿದೆ. ಭಾರತದ ಇತರೆಡೆಯೂ ಹೀಗೆ ಆಗುತ್ತಿದೆಯಾ?**

ನಾನು ಒಡಿಶಾದವನಾದರೂ ನನಗೆ ತಮಿಳಿನಲ್ಲಿ ಧೀ ತರಹದವರು ರ್‍ಯಾಪ್ ಮಾಡಿ ಯಶಸ್ವಿಯಾಗಿರುವ ಮಾದರಿ ಕಾಣುತ್ತದೆ. ಹೀಗೆಯೇ, ಮರಾಠಿ ಭಾಷೆಯು ಇನ್ಯಾರಿಗೋ ಪ್ರಭಾವ ಬೀರಿರುವ ಸಾಧ್ಯತೆಯೂ ಇದೆ. ತಮಿಳಿನಲ್ಲಿ ಸಿನಿಮಾದ ಒಳಗೆ ದಲಿತ ಸಂವೇದನೆಯವರು ಪ್ರವೇಶ ಮಾಡಿ ವರ್ಷಗಳೇ ಉರುಳಿವೆ. ಹೀಗಾಗಿ, ಅಲ್ಲಿ ರ್‍ಯಾಪ್ ಕೂಡ ಹೆಚ್ಚು ಜನಪ್ರಿಯ.

◆ **ತಮಿಳುನಾಡಿನ ಸಿನಿಮಾ ಸಂಸ್ಕೃತಿಯನ್ನು ನೀವು ಸೂಕ್ಷ್ಮವಾಗಿ ಗಮನಿಸಿರುವಿರಿ. ಅದರ ಬಗೆಗೆ ವಿವರವಾಗಿ ಹೇಳಿ.**

ತಮಿಳುನಾಡಿನಲ್ಲಿ ‘ಮಧುರೈ ಪ್ರಣೀತ’